
## ಕಥೋಪದೇಶ




# ಅಶ್ವಮೇಧದ ಫಲ

ಹೆಚ್.ಟಿ. ನಾಗರಾಜು

ಕಲೆ : ಜೆ.ಸಿ. ಸಿದ್ದಲಿಂಗಯ್ಯ

ಮಹಾಭಾರತದ ಕೊನೆಯಲ್ಲಿ ಒಂದು ವಿಜಯೋತ್ಸವವನ್ನು ಆಚರಿಸಲು ಪಾಂಡವರು ಅಶ್ವಮೇಧ ಯಾಗವನ್ನು ಮಾಡಿದರು. ಅಶ್ವಮೇಧ ಯಾಗ ಸಫಲವಾಗಿದ್ದರೆ, ಯಾಗದ ಅಂತ್ಯದಲ್ಲಿ ಅದರ ಸೂಚಕವಾಗಿ ಆಕಾಶದಿಂದ ಘಂಟಾನಾದ ಕೇಳಿಬರಬೇಕು ಎಂದು ಶ್ರೀಕೃಷ್ಣ ಪಾಂಡವರಿಗೆ ತಿಳಿಸಿದ್ದ. ಆದರೆ ಘಂಟಾನಾದ ಕೇಳಿಬರಲಿಲ್ಲ. ಕಾರಣ ಎಲ್ಲರೂ ಯಾಗಕ್ಕೆ ಬಂದು ಉಂಡು ಸಂತೃಪ್ತರಾಗಿದ್ದರೂ, ಒಬ್ಬ ಕೀಳು ಜಾತಿಯವ ಎನಿಸಿಕೊಂಡವನು ಆ ಯಾಗಕ್ಕೆ ಬಂದಿರಲಿಲ್ಲ. ಜಾತಿಯಲ್ಲಿ ಕೀಳಾದರೂ ಅವನು ಶ್ರೇಷ್ಠ ತತ್ತ್ವಜ್ಞಾನಿಯಾಗಿದ್ದ. ಅವನನ್ನು ಕರೆತರಲು ಪಾಂಡವರೇ ರಾಜಠೀವಿಯಿಂದ ಹೋದಾಗ ಆತ ತನಗೆ ನೂರೊಂದು ಅಶ್ವಮೇಧ ಯಾಗಗಳ ಫಲವನ್ನು ಧಾರೆಯೆರೆದು ಕೊಟ್ಟರೆ ಮಾತ್ರ ತಾನು ಯಾಗಕ್ಕೆ ಬರುವೆನೆಂಬ ತನ್ನ ನಿಬಂಧನೆಯನ್ನು ಹೇಳಿ, ಅವರ ಆಮಂತ್ರಣವನ್ನು ತಿರಸ್ಕರಿಸಿದ.

ಪಾಂಡವರಿಗೆ ಚಿಂತೆ ಹಚ್ಚಿಕೊಂಡಿತು. ಒಂದು ಯಾಗವನ್ನೇ ಅವರು ಸರಿಯಾಗಿ ಮಾಡಲಾಗಿಲ್ಲ, ಇನ್ನು ನೂರೊಂದು ಅಶ್ವಮೇಧ ಯಾಗಗಳ ಫಲ ಹೇಗೆ ಕೊಟ್ಟಾರು? ಪಾಂಡವರ ವ್ಯಥೆಯನ್ನು ನೋಡಿ ದ್ರೌಪದಿಯು ಮುಂದೆ ಬಂದು ತಾನು ಆ ತತ್ತ್ವಜ್ಞಾನಿಯನ್ನು ಕರೆತರುವೆ ಎಂದು ಅವರಿಗೆ ಭರವಸೆಯಿತ್ತಳು. ಆತನಿಗಾಗಿ ವಿಶೇಷ ಭಕ್ಷ್ಯಗಳನ್ನು ತಯಾರಿಸಿ, ಬರಿಗಾಲಿನಲ್ಲಿ ಅವನ ಗುಡಿಸಲಿಗೆ ಹೋಗಿ ಅತ್ಯಂತ ವಿನಯ ಹಾಗೂ ನಮ್ರತೆಯಿಂದ ತಮ್ಮ ಮನೆಗೆ ಬರುವಂತೆ ಕೇಳಿಕೊಂಡಳು. ಆತ ಮೊದಲು ಪಾಂಡವರಿಗೆ ಹೇಳಿದ ನಿಬಂಧನೆಯನ್ನೇ ಆಕೆಗೂ ಹೇಳಿದ. ಬುದ್ಧಿವಂತೆಯಾದ ದ್ರೌಪದಿ ಆತನಿಗೆ ಹೇಳಿದಳು: "ಒಬ್ಬ ವ್ಯಕ್ತಿ ಪ್ರೇಮ ಭಕ್ತಿಗಳಿಂದ ಜ್ಞಾನಿಯ ಮನೆಗೆ ಹೋದಾಗ, ಇಡುವ ಒಂದೊಂದು ಹೆಜ್ಜೆಗೂ ಒಂದೊಂದು ಅಶ್ವಮೇಧ ಯಾಗದ ಫಲವಿರುತ್ತದೆ. ಹೀಗಾಗಿ ತಮ್ಮ ಬಳಿಗೆ ಬರುವಾಗ ನನಗೆ ಪ್ರಾಪ್ತವಾದ ಪುಣ್ಯದಲ್ಲಿ ನೂರೊಂದು ಅಶ್ವಮೇಧ ಯಾಗಗಳಷ್ಟು ಪುಣ್ಯವನ್ನು ತಾವೇ ಇಟ್ಟುಕೊಂಡು ಉಳಿದದ್ದನ್ನು ನನಗೆ ಬಿಡಿ."



ದ್ರೌಪದಿಯ ಮಾತುಗಳಲ್ಲಿದ್ದ ಪ್ರಾಮಾಣಿಕತೆ ತತ್ತ್ವಜ್ಞಾನಿಯ ಹೃದಯವನ್ನು ತಟ್ಟಿತು. ಆಕೆಯ ಭಕ್ತಿ ಹಾಗೂ ನಮ್ರತೆಗಳಿಗೆ ಮೆಚ್ಚಿ ಆ ಜ್ಞಾನಿ ಮತ್ತೆ ಯಾವ ಆಕ್ಷೇಪಣೆಯನ್ನೂ ಎತ್ತದೆ ಮೌನವಾಗಿ ಆಕೆಯನ್ನು ಹಿಂಬಾಲಿಸಿ ಯಾಗದ ಸ್ಥಳಕ್ಕೆ ಹೋದ. ಆತ ಯಜ್ಞ ಸಮಾರಂಭದಲ್ಲಿ ಭಾಗಿಯಾಗಿ ಯಾಗವನ್ನು ಸಫಲಗೊಳಿಸಿದ. ಅದರ ಸೂಚಕವಾಗಿ ಆಕಾಶದಲ್ಲಿ ಘಂಟೆಯೂ ಬಾರಿಸಿತು.